


## ಉತ್ತಮ ಮಾಹಿತಿ

ಹಳೇ ಸಿನಿಮಾ; ಬಣ್ಣದ ಮಹಿಮೆ (ಸುಧಾ, ಫೆ. 5 ಸಂಚಿಕೆ) ವಿಶಾಖ ಎನ್ ಅವರ ಮುಖಪುಟ ಲೇಖನದಲ್ಲಿ ಹಳೆಯ ಕಪ್ಪು ಬಿಳುಪು ಸಿನಿಮಾಗಳನ್ನು ವರ್ಣರಂಜಿತ ಮಾಡುತ್ತಿರುವ ಬಗ್ಗೆ ಉತ್ತಮ ಮಾಹಿತಿ ಇದೆ. ಚಲನಚಿತ್ರಗಳು ಯಾವುದೇ ಬಣ್ಣದ್ದಿರಲಿ, ಪ್ರೇಕ್ಷಕರು ಕಥೆ, ನಟನೆ, ಗೀತೆ, ಶೂಟಿಂಗ್ ತಾಣಗಳಿಗೆ ಮಹತ್ವ ಕೊಡುವುದು ಸತ್ಯ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ಕಣ್ಮನ ಸೂರೆಗೊಂಡಿತು

ಡಾ. ರಾಜಕುಮಾರ್ ಅವರ ಅತ್ಯಾಕರ್ಷಕ ಮುಖಪುಟದೊಂದಿಗೆ ಮೂಡಿಬಂದ ಸಂಚಿಕೆ ಕಣ್ಮನ ಸೂರೆಗೊಂಡಿತು.

–ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಸುಂದರ್, ಬೆಂಗಳೂರು, ಎಚ್.ಆನಂದಕುಮಾರ್, ಚಿತ್ರದುರ್ಗ, ಎಚ್.ಆರ್.ದೇಸಾಯಿ, ರಾಯಚೂರು

## ಸಕಾಲಿಕ

'ನಿಮ್ಮೊಡನೆ'ಯಲ್ಲಿ ಸಾಹಿತ್ಯ ಸಮ್ಮೇಳನದ ಬಗ್ಗೆ ಬಿ.ಎಂ. ಹನೀಫ್ ಅವರು ಬರೆದ ವಿಚಾರಗಳು ಸಕಾಲಿಕವಾಗಿವೆ. ಸಾಹಿತ್ಯ ಸಮ್ಮೇಳನಗಳು ಒಂದಲ್ಲ ಒಂದು ರೀತಿಯಲ್ಲಿ ಗೊಂದಲದ ಗೂಡಾಗುತ್ತಿವೆ. ಸಾಕಷ್ಟು ಹಣ ವ್ಯಯ ಮಾಡಿ ಸಮ್ಮೇಳನ ಆಯೋಜಿಸಿದರೂ ಕನ್ನಡದ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ ಎಂಬುದು ಸತ್ಯವಾದ ಮಾತು.

–ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ

## ಒಂದಾಗಿ ಹೋರಾಡಬೇಕು

ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡದ ಪ್ರಚಾರ, ಪ್ರಸಾರ, ಚರ್ಚೆ ಆಗುತ್ತದೆ. ಅಧ್ಯಕ್ಷತೆ ಬಿಟ್ಟು ಕೊಟ್ಟ ದೇವನೂರ ಮಹಾದೇವರ ಕನ್ನಡ ಕಾಳಜಿ ಮೆಚ್ಚುವಂಥದ್ದು. ಅವರ ಮಾತು ಉಳಿಸಲು ಕನ್ನಡಿಗರು ಒಂದುಗೂಡಿ ಹೋರಾಡಬೇಕು. ಇಂಗ್ಲಿಷ್ ಕೇವಲ ಒಂದು ಭಾಷೆಯಾಗಿ ಕಲಿಸಬೇಕು.

–ಮಹಾವೀರ ಕಾಸರ, ಶಿವಮೊಗ್ಗ

## ಸಮರ್ಪಕ

ವಿಚಾರಲಹರಿಯಲ್ಲಿ ವೈನತೇಯ ಅವರ 'ಬಹುರೂಪಿ ಭಗವದ್ಗೀತೆ' ಕುರಿತ ಬರಹ ಸಮರ್ಪಕವಾಗಿದೆ. ಸಂಕೀರ್ಣ ಸ್ವರೂಪದ ಗೀತೆಯನ್ನು ಲೇಖಕರು ಪೂರ್ಣದೃಷ್ಟಿಯಿಂದ ಪರಿಶೀಲಿಸಿ ಅದರ ಮುಖ್ಯಾಂಶಗಳನ್ನು ಸಮಂಜಸವಾಗಿ ಬರೆದಿದ್ದಾರೆ.

–ಬಿ.ವಿ.ಕೆ. ಬೆಂಗಳೂರು

## ಪೂರ್ವಾಗ್ರಹ ಎನಿಸಿತು

ನಂಬಿಕೆ ಮತ್ತು ನಿಜದ ವಿಷಯಗಳಲ್ಲಿ ವೈನತೇಯ ಅವರು ಪೂರ್ವಾಗ್ರಹಪೀಡಿತರಾಗಿದ್ದಾರೆ ಎನಿಸಿತು. ಎಷ್ಟೋ ಆಧುನಿಕ ಸಂಶೋಧನೆಗಳನ್ನು ಕಾಲ್ಪನಿಕತೆಯ ಮೂಲದಲ್ಲಿಯೇ ನೆರವೇರಿಸುತ್ತಿರುವುದು ನಿಜವಲ್ಲವೇ?

–ನೇ.ಗೋ.ಭ. ಕುಕ್ಕೆಸುಬ್ರಹ್ಮಣ್ಯ

## ಮುದ್ರಾದೋಷ

ಈ ಸಲ ವೈನತೇಯರ ವಿಚಾರಲಹರಿಯಲ್ಲಿ ಮುದ್ರಾದೇವತೆ ಅನ್ಯಮನಸ್ಕಳಾಗಿದ್ದಾಳೇನೋ ಎನಿಸಿತು. ಕೆಲವು ಸಂದೇಹಾಸ್ಪದ ವ್ಯಾಕರಣ ದೋಷ, ಕೆಲವಂತೂ ಅರ್ಥವೇ ಆಗಿಲ್ಲ. 3ನೇ ಸಾಲಿನಲ್ಲಿ 'ಪ್ರಯಾಃ' ಎಂದಿದೆ. ಇದು ಪ್ರಾಯಶಃ ಆಗಿರಬೇಕಲ್ಲವೇ.? ಮೂರನೇ ಪ್ಯಾರಾದ ಕೊನೆಗೆ 'ಸರ್ನಾರ್ಪಣ' ಎಂಬ ಶಬ್ದವಿದೆ. ಇದರ ಅರ್ಥ ತಿಳಿಯಲಿಲ್ಲ. ಕೊನೆಯಲ್ಲಿ ದೇವಭಾವ ಎಂದಿದೆ. ಇದು ಸರಿಯೇ?

–ಕೆ.ಎಂ. ಮಧ್ವರಾಯ, ಬೆಂಗಳೂರು

(ಕಣ್ತಪ್ಪಿನಿಂದ ಕೆಲವು ತಪ್ಪುಗಳು ನುಸುಳಿವೆ. ಕ್ಷಮಿಸಿ. ಪ್ರಯಾಃ ಶಬ್ದ ಪ್ರಾಯಃ ಮತ್ತು ಸರ್ನಾರ್ಪಣ ಶಬ್ದ 'ಸರ್ವಾರ್ಪಣ' ಎಂದಾಗ ಬೇಕಿತ್ತು. –ಸಂ)

## ಅಮೃತಮಹಲ್

ದಿನೇಶ್ ಪಟವರ್ಧನ್ ಅವರ 'ಅವಸಾನದ ಅಂಚಿನಲ್ಲಿ ಅಮೃತಮಹಲ್' ಲೇಖನ ಜಾನುವಾರು ತಳಿ ಅಭಿವೃದ್ಧಿ ಕೇಂದ್ರಗಳು ಅವಸಾನದ ಅಂಚಿಗೆ ಹೋಗುತ್ತಿರುವುದು, ಅದಕ್ಕಾಗಿ ಮೀಸಲಿಟ್ಟ ಜಾಗ, ಹಣ ದುರುಪಯೋಗವಾಗುತ್ತಿರುವುದು, ಸರ್ಕಾರದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಉದಾಹರಣೆಯಾಗಿದೆ.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

## ಪ್ರತಿಬಿಂಬಿಸುತ್ತದೆ

ಸರೋಜಾ ಪ್ರಭಾಕರ್ ಅವರ ಕಥೆ 'ಅಹಲ್ಯೆ' ಪ್ರಸ್ತುತ ಕಾಲ ಮಹಿಳೆಯರ ಜೀವನವನ್ನು ಪ್ರತಿಬಿಂಬಿಸುತ್ತದೆ.

–ಎಸ್. ವಿಜಯಕುಮಾರಿ, ಬೆಂಗಳೂರು

## *ಸದಾ ಕಂಗೊಳಿಸುವ ಸುಧಾ*

*ನಾನು ವೈದ್ಯನಾಗಿ ಕೆಲವು ತಿಂಗಳುಗಳಲ್ಲೇ ಕಣ್ಣು ಬಿಟ್ಟ ಸುಧಾ ಇದೀಗ 51ನೇ ವರ್ಷಕ್ಕೆ ಕಾಲಿಟ್ಟಿದ್ದಾಳೆ. ಸುಮಾರು 40 ವರ್ಷ ಕಪ್ಪು ಬಿಳುಪು ಪುಟಗಳಿಂದ ರಂಜಿಸಿದ ಸುಧಾ ವರ್ಷ ಕಳೆದಂತೆ ವರ್ಣರಂಜಿತ ಪುಟ, ಹೊಸ ಹೊಸ ಲೇಖನ, ಬಗೆ ಬಗೆ ವಿನ್ಯಾಸ, ಆಲೋಚನೆಗಳನ್ನು ಒರೆಗೆ ಹಚ್ಚುವ ಸ್ಪರ್ಧಾ ವಿಭಾಗಗಳಿಂದ ಕಂಗೊಳಿಸುತ್ತಿದ್ದಾಳೆ.*

*–ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ*

### ಸೈನಿಕ ಸಾಹಿತ್ಯ ಕಥಾ ಸ್ಪರ್ಧೆ

ಧಾರವಾಡದ ಸಶ್ರೀ ಕುಮಾಂವು ಪ್ರತಿಷ್ಠಾನ ಮಿಲಿಟರಿ ಮತ್ತು ರಾಷ್ಟ್ರೀಯ ಸುರಕ್ಷಾ ಸಂಬಂಧಿತ (ಸಮರ, ಸೈನ್ಯ, ಸೈನಿಕ) ವಿಷಯಗಳ ಬಗ್ಗೆ ಜನತೆಯಲ್ಲಿ ಅರಿವು ಆಸಕ್ತಿ ಮೂಡಿಸುವ ಸಲುವಾಗಿ ಜನರಲ್ ತಿಮ್ಮಯ್ಯ ಸೈನಿಕ ಕಥಾ ಸ್ಪರ್ಧೆ ಏರ್ಪಡಿಸಿದೆ. ಕಥೆ 3000 ಶಬ್ದಗಳನ್ನು ಮೀರಬಾರದು. ಯಾರು ಬೇಕಾದರೂ ಭಾಗವಹಿಸಬಹುದು. ಕಥೆ ಮೊದಲು ಎಲ್ಲೂ ಪ್ರಕಟವಾಗಿರಬಾರದು. ಕೊನೆಯ ದಿನಾಂಕ ಫೆಬ್ರುವರಿ 28.

ವಿಳಾಸ: ಸಶ್ರೀ ಕುಮಾಂವು ಪ್ರತಿಷ್ಠಾನ ಕಥಾ ಸ್ಪರ್ಧೆ, ಎಸ್.ಸಿ. ಸರದೇಶಪಾಂಡೆ, ಆರನೇ ಕ್ರಾಸ್, ಮಾಳಮಡ್ಡಿ, ಧಾರವಾಡ–580007. ಫೋನ್: 0836 27433711

ಶ್ರೀ ಟ್ರಾವಲ್ಸ್

ಕಾಶಿ-ಗಯ-ಅಲಹಾಬಾದ್ ಯಾತ್ರೆ
ಹೊರಡುವ ದಿನಾಂಕ: 15.02.15; 17.03.15; 15.04.15; 14.05.15; 13.06.15

ನವ ಜ್ಯೋತಿರ್ಲಿಂಗ ಯಾತ್ರೆ (19 ದಿನಗಳು)
(ಹವಾ ನಿಯಂತ್ರಣ ರಹಿತ ಸಾರಿಗೆ)
ಹೊ.ದಿ. 23.02.2015, 23.03.2015, 06.07.2015

ಕೈಲಾಶ್ ಮಾನಸ ಸರೋವರ್ ಯಾತ್ರೆ (ಹುಣ್ಣಿಮೆಯ ದಿನ) (14 ದಿನಗಳು)
ಹೊ.ದಿ. May, June, July & Aug'15

ಶ್ರೀಲಂಕ ರಾಮಾಯಣ ಯಾತ್ರೆ
ಹೊ.ದಿ. 09.03.15; 20.04.15; 04.05.15; 01.06.15

ಪಂಚದ್ವಾರಕ ಯಾತ್ರೆ ಜತೆಗೆ ನಿಷ್ಕಲಂಕ ಮಹದೇವ್ ದೇವಸ್ಥಾನ (ಕೋಲಿಯಾಕ ಸಮುದ್ರ ದೇವಸ್ಥಾನ) ಮತ್ತು ಪುಷ್ಕರ್
(ಹವಾ ನಿಯಂತ್ರಣ ಸಾರಿಗೆ (A/C))
ಹೊ.ದಿ: 02.03.15; 30.03.15; 20.04.15

ಮುಕ್ತಿನಾಥ ಯಾತ್ರೆ ಜೊತೆಗೆ ಚಿತ್ರಕೂಟ್, ನೈಮಿಶಾರಣ್ಯ, ಜನಕ್‌ಪುರಿ, ಸೀತಾಮರಿ ಮತ್ತು ಗಯ (17 ದಿನಗಳು)
ಹೊ.ದಿ. 04.03.2015; 16.04.2015; 07.05.2015; 04.06.2015

ಮುಕ್ತಿನಾಥ ಯಾತ್ರೆ ವಿಮಾನ ಪ್ರಯಾಣ (6 ದಿನಗಳು)
ಹೊ.ದಿ. 09.03.2015; 21.04.2015; 12.05.2015; 09.06.2015

ಮುಕ್ತಿನಾಥ ಯಾತ್ರೆ (9 ದಿನಗಳು)
ಹೊ.ದಿ. 07.03.2015; 19.04.2015; 10.05.2015; 07.06.2015

ಚಾರ್‌ಧಾಮ್ ಯಾತ್ರೆ
ಹೊ.ದಿ. 22.05.2015; 04.06.2015

ಅಮರನಾಥ್ ದರ್ಶನ್ ಯಾತ್ರೆ
ಹೊ.ದಿ. 25.06.2015

ಅಂಡಮಾನ್ ದ್ವೀಪ ಯಾತ್ರೆ
ವಯಸ್ಕರಿಗೆ Rs.13,900 + ವಿಮಾನ ಟಿಕೆಟ್
(ಯಾತ್ರೆ 4 ರಾತ್ರಿ + 5 ದಿನಗಳು)

ಕಾಶ್ಮೀರ್ ಯಾತ್ರೆ (14 ದಿನಗಳು)
ಹೊ.ದಿ. 10.04.2015; 08.05.2015; 22.05.2015

ಶಿಮ್ಲಾ - ಕುಲು - ಮನಾಲಿ ಯಾತ್ರೆ
ಹೊ.ದಿ. 17.04.2015; 08.05.2015; 22.05.2015

ಕೋಲ್ಕತ್ತಾ ಡಾರ್ಜಿಲಿಂಗ್ ಗ್ಯಾಂಗಟಕ್ ಯಾತ್ರೆ
ಹೊ.ದಿ. 10.04.2015; 24.04.2015; 08.05.2015; 22.05.2015

ಸಿಂಗಪೂರ್ ಮತ್ತು ಮಲೇಷಿಯಾ ಯಾತ್ರೆ
ಹೊ.ದಿ. 09.03.15; 20.04.15; 04.05.15; 01.06.15

Veg. Food by Brahmin Cooks,
Decent Rooms,
2 x 2 Bus for sight seeing with guide, etc.,

ಮಲ್ಲೇಶ್ವರಂ, ಬೆಂಗಳೂರು – 560 003
080-23340191,
9731260953, 9620406893
E-mail: sreetravelsblr@gmail.com
Website: www.sreetravelsblr.com